**RNI No. KARBIL/2001/47147**

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| **ಭಾಗ–IVA** | ಬೆಂಗಳೂರು, ಮಂಗಳವಾರ, ಜನವರಿ ೩೧, ೨೦೧೭ (ಮಾಘ ೧೧, ಶಕ ವರ್ಷ ೧೯೩೮) | ನಂ. ೧೨೭ |
| **Part–IVA** | **Bengaluru, Tuesday, January 31, 2017 (Magha 11, Shaka Varsha 1938)** | **No. 127** |

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಗ್ರಾಅಪ 543 ಗ್ರಾಪಂಅ 2016, ಬೆಂಗಳೂರು, ದಿನಾಂಕ: 27–01–2017.**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (ಕರ್ನಾಟಕ 1993ರ ಅಧಿನಿಯಮ ಸಂಖ್ಯೆ 14)ರ ಪ್ರಕರಣ 296–ಎಫ್ ರೊಡನೆ ಓದಿಕೊಂಡಂತೆ ಪ್ರಕರಣ 311 ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ದೂರನ್ನು ದಾಖಲ್ಮಾಡುವ ಪ್ರಕ್ರಿಯೆ ಮತ್ತು ವಿಲೇ ವಿಧಾನಗಳು) ನಿಯಮಗಳು, 2016 ರ ಕರಡನ್ನು ದಿನಾಂಕ:28–07–2016 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ–IV-A, ನಂ.977 ರಲ್ಲಿ ಅಧಿಸೂಚನೆ ಸಂಖ್ಯೆ:ಗ್ರಾಅಪ 543 ಗ್ರಾಪಂಅ 2016, ದಿನಾಂಕ: 28–07–2016 ರ ಮೂಲಕ ಪ್ರಕಟಿಸಿದ್ದು, ಆ ಮೂಲಕ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ:28–07–2016ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಬಾರದಿರುವುದರಿಂದ;

ಈಗ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (ಕರ್ನಾಟಕ 1993ರ ಅಧಿನಿಯಮ ಸಂಖ್ಯೆ 14)ರ ಪ್ರಕರಣ 296–ಎಫ್ ರಲ್ಲಿ ಓದಲಾದಂತೆ ಸದರಿ ಅಧಿನಿಯಮದ 311ನೇ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ನಿಯಮಗಳನ್ನು ರಚಿಸುತ್ತದೆ, ಎಂದರೆ;–

## ನಿಯಮಗಳು

**1. ಹೆಸರು ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ದೂರನ್ನು ದಾಖಲು ಮಾಡುವ ಪ್ರಕ್ರಿಯೆ ಮತ್ತು ವಿಲೇ ವಿಧಾನಗಳು) ನಿಯಮಗಳು, 2017 ಎಂದು ಕರೆಯತಕ್ಕದ್ದು.

(2)ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿತವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:-**ಈ ನಿಯಮಗಳಲ್ಲಿ ವಿಷಯಕ್ಕೆ ಅಥವಾ ಸಂಧರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ,-

(a)"ಅಧಿನಿಯಮ" ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14);

(b) "ನಮೂನೆ" ಎಂದರೆ ಈ ನಿಯಮಗಳಲ್ಲಿ ನಿಗಧಿಪಡಿಸಲಾದ ನಮೂನೆ: ಮತ್ತು

(C) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ.

**3. ದೂರನ್ನು ದಾಖಲು ಮಾಡುವ ಪ್ರಕ್ರಿಯೆ ಮತ್ತು ವಿಲೇ ವಿಧಾನ:-** (1) ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ಯಾವುದೇ ಬಾಧಿತ ವ್ಯಕ್ತಿಯು ನಮೂನೆಯಲ್ಲಿ ದೂರನ್ನು ಅಥವಾ ಆಪಾದನೆಯನ್ನು ದಾಖಲು ಮಾಡಿ ಅಫೀಡವಿಟ್‌ನ ಸಮರ್ಥನೆಯೊಂದಿಗೆ ಸದರಿ ದೂರಿಗೆ ಅಥವಾ ಅಪಾದನೆಗೆ ಪೂರಕವಾಗಿರುವ ಎಲ್ಲಾ ದಾಖಲಾತಿಗಳನ್ನು ಛಾಯಾ ಪ್ರತಿಯಲ್ಲಿ ಸ್ವಯಂ ಧೃಡೀಕರಣಗೊಳಿಸಿ ಸಲ್ಲಿಸತಕ್ಕದ್ದು.

(2) ದೂರನ್ನು ಸ್ವೀಕರಿಸಿದ ತಕ್ಷಣ ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ದೂರು ದಾಖಲಿಸಿದ ವ್ಯಕ್ತಿಗೆ ದೂರು ದಾಖಲಿಸಿದ ದಿನಾಂಕ ಮತ್ತು ಸ್ವೀಕೃತಿಯಾದ ದಾಖಲೆಗಳ ಬಗೆಗೆ ಸ್ವೀಕೃತಿಯನ್ನು ತಕ್ಷಣವೇ ನೀಡತಕ್ಕದ್ದು.

(3) ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯು ದೂರು ಸ್ವೀಕರಿಸಿದ ತಕ್ಷಣ ಯಾವ ಅಧಿಕಾರಿಯ ಅಥವಾ ವ್ಯಕ್ತಿಯ ವಿರುದ್ಧ ದೂರನ್ನು ದಾಖಲಿಸಲಾಗಿದೆಯೋ ಅಂಥ ಅಧಿಕಾರಿಗೆ ಅಥವಾ ವ್ಯಕ್ತಿಗೆ ಸದರಿ ದೂರಿನ ಪ್ರತಿಯನ್ನು ಕಳುಹಿಸಿ, ಆ ದೂರಿನ ಬಗ್ಗೆ ತನ್ನ ವಿವರಣೆಯನ್ನು ನೀಡಲು ಅಥವಾ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ತನಿಖೆಯನ್ನು ನಡೆಸಬಹುದು ಮತ್ತು ತಾನು ಯುಕ್ತವೆಂದು ಭಾವಿಸಬಹುದಾದಂತೆ ಸಂದರ್ಭಾನುಸಾರ ಕ್ರಮ ತೆಗೆದುಕೊಳ್ಳಬಹುದು. ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯಿಂದ ಸ್ವೀಕೃತವಾದ ದೂರು ಒಂದು ವೇಳೆ ಅಂಥ ಅಧಿಕಾರಿಗೆ ಅಥವಾ ವ್ಯಕ್ತಿಗೆ ಸಂಬಂಧಿಸಿಲ್ಲದಿದ್ದರೆ ಅದನ್ನು ಸಂಬಂಧಿಸಿದ ಅಧಿಕಾರಿಗೆ ಅಥವಾ ವ್ಯಕ್ತಿಗೆ ಕಳುಹಿಸಿ, ಅದನ್ನು ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿ, ಅದರ ಪ್ರತಿಯನ್ನು ಕುಂದು ಕೊರತೆ ನಿವಾರಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. ಆ ರೀತಿಯ ದೂರನ್ನು ಸ್ವೀಕರಿಸಿದ ಅಧಿಕಾರಿಯು ಸೂಕ್ತ ಕ್ರಮ ತೆಗೆದುಕೊಂಡು ಕುಂದು ಕೊರತೆ ನಿವಾರಣಾ ಪ್ರಾಧಿಕಾರಕ್ಕೆ ವಿವರಣೆ ಅಥವಾ ಅಹವಾಲನ್ನು ನೀಡತಕ್ಕದ್ದು.

(4) ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯು ಸಂಬಂಧಿಸಿದ ಅಧಿಕಾರಿ ಅಥವಾ ವ್ಯಕ್ತಿಯ ಅಸಮರ್ಥತೆ, ನಿರ್ಲಕ್ಷ್ಯ ಅಥವಾ ದುಷ್ಕೃತ್ಯದ ಪರಿಣಾಮವಾಗಿ ದೂರನ್ನು ದಾಖಲಿಸಲಾಗಿದೆ ಎಂಬುದನ್ನು ಅಂಥ ಅಧಿಕಾರಿ ಅಥವಾ ವ್ಯಕ್ತಿಗೆ ಸಮರ್ಥನೆಗೆ ಅವಕಾಶ ನೀಡಿದ ತರುವಾಯ ಮನದಟ್ಟು ಮಾಡಿಕೊಂಡು ಸೂಕ್ತ ಆದೇಶದ ಮೂಲಕ ಸದರಿ ಅಧಿಕಾರಿಯ ಮೇಲೆ ಶಿಸ್ತು ಕ್ರಮವನ್ನು ನಡತೆ ನಿಯಮಗಳನ್ವಯ ಅಥವಾ ಇಲಾಖಾ ಪ್ರಕ್ರಿಯೆಯ ಅನುಸಾರ ನಡೆಸಲು ಸೂಕ್ತ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. ಒಂದು ವೇಳೆ ಸರಕುಗಳ ಮತ್ತು ಸೇವೆಗಳನ್ನು ನೀಡಲು ಜವಾಬ್ದಾರನಾದ ವ್ಯಕ್ತಿಯು ಬೇಕಾಗಿಯೇ ಸರಕು ಅಥವಾ ಸೇವೆಯನ್ನು ಒದಗಿಸಲು ನಿರ್ಲಕ್ಷಿಸಿರುವ ಅಥವಾ ಭ್ರಷ್ಟಾಚಾರ ತಡೆಗಟ್ಟುವ ಅಧಿನಿಯಮ, 1988 ರ ಅಡಿಯಲ್ಲಿ ಪ್ರಕರಣದ ಮೇಲ್ನೋಟದಲ್ಲೇ ಆಧಾರಗಳು ಇದ್ದಾಗ ಆ ಮಟ್ಟಿಗೆ ವಿಧಿಸಬೇಕಾದ ದಂಡದ ಶಿಫಾರಸ್ಸಿನೊಂದಿಗೆ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸುವುದು. ಈ ವರದಿಯ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರವು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

(5) ಕುಂದು ಕೊರತೆ ನಿವಾರಣಾ ಪ್ರಾಧಿಕಾರವು ದೂರು ದಾಖಲು ಮಾಡಿದ ಬಾಧಿತ ನಾಗರೀಕರಿಗೆ ತನ್ನ ನಿರ್ಧಾರವನ್ನು ದೂರು ಸ್ವೀಕರಿಸಿದ ಅರವತ್ತು ದಿನಗಳೊಳಗಾಗಿ ತಿಳಿಸತಕ್ಕದ್ದು.

**4. ದೂರಿನ ಜೊತೆಗೆ ಇರಬೇಕಾದ ಫೀಜುಗಳು:–** ದೂರನ್ನು ದಾಖಲು ಮಾಡುವ ವ್ಯಕ್ತಿಯು ನಮೂನೆಯ ಜೊತೆಗೆ ಕುಂದು ಕೊರತೆ ನಿವಾರಣಾ ಪ್ರಾಧಿಕಾರಿಯ ಹೆಸರಿನಲ್ಲಿ ಹತ್ತು ರೂಪಾಯಿಯ ಪೋಸ್ಟಲ್ ಆರ್ಡರ್ ಅಥವಾ ಬ್ಯಾಂಕಿನಲ್ಲಿ ಹಣ ಸಂದಾಯ ಮಾಡಿರುವ ರಸೀದಿಯೊಂದಿಗೆ ಸಲ್ಲಿಸತಕ್ಕದ್ದು.

## ನಮೂನೆ

**(ನಿಯಮ 3 (1) ನ್ನು ನೋಡಿ)**

ಕುಂದು ಕೊರತೆ ನಿವಾರಣಾ ಪ್ರಾಧಿಕಾರಕ್ಕೆ ದೂರುಗಳನ್ನು ಸಲ್ಲಿಸಲು ಅರ್ಜಿ ನಮೂನೆ

**ಇವರಿಗೆ:**

ಕುಂದು ಕೊರತೆ ನಿವಾರಣಾ ಪ್ರಾಧಿಕಾರಿ,

-----------ಜಿಲ್ಲೆ.

**ಮಾನ್ಯರೆ,**

| | | |
|---|---|---|
| 1. | ದೂರುದಾರರ ಹೆಸರು ಮತ್ತು ದೂರವಾಣಿ ಸಂಖ್ಯೆ (ಇದ್ದಲ್ಲಿ) | |
| 2. | ದೂರುದಾರರ ವಿಳಾಸ | |
| 3. | ವಿರುದ್ಧ ದೂರು ಸಲ್ಲಿಸುತ್ತಿರುವ ಪಂಚಾಯತಿಯ ಹೆಸರು | |
| 4. | ವಿರುದ್ಧ ದೂರು ಸಲ್ಲಿಸುತ್ತಿರುವ ಪಂಚಾಯತಿಯ ಅಧ್ಯಕ್ಷ/ ಉಪಾಧ್ಯಕ್ಷ/ಸದಸ್ಯರು/ಅಧಿಕಾರಿ/ವ್ಯಕ್ತಿ ಅಥವಾ ನೌಕರರ ಹೆಸರು | |
| 5. | ಪಂಚಾಯತಿ ಕರ್ತವ್ಯಗಳು ಅಥವಾ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಸೇವಾ ಲೋಪ, ಅಧಕ್ಷತೆ, ನಿರ್ಲಕ್ಷತೆ, ಅಸಮರ್ಥತೆ ಅಥವಾ ದುಷ್ಕೃತ್ಯದ ಸ್ವರೂಪಗಳು | |
| 6. | ಪೂರಕ ದಾಖಲೆಗಳು/ಸಾಕ್ಷ್ಯಗಳು | |
| 7. | ಅಫಿಡವಿಟ್ (ಪ್ರಮಾಣ ಪತ್ರ) | |
| 8. | ದೂರುದಾರರು ಒದಗಿಸಬಹುದಾದ ಇತರೆ ಯಾವುದೇ ಮಾಹಿತಿ (ಮಾಹಿತಿಗಳನ್ನು ದಾಖಲಿಸಲು ಹೆಚ್ಚಿನ ಪುಟಗಳನ್ನು ಬಳಸಿಕೊಳ್ಳಬಹುದು) | |

**ಸ್ಥಳ:**

**ದಿನಾಂಕ:** **ದೂರುದಾರರ ಹೆಸರು ಮತ್ತು ಸಹಿ**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ವಿ. ಅರುಣ್‌ಕುಮಾರ್**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.